ಗಾಡಿ ವೇಗತಳೆದು ತಾಳಹಾಕುತ್ತಾ ಮುಂದೆ ಸಾಗಿತು. ಕಾಲುಗಳೆರಡೂ ಕ್ರಮೇಣ ತಾಳಕ್ಕನುಗುಣವಾಗಿ ಹಾಡಲು ತೊಡಗಿದುವು. ಮೊದಲು ಆನಂದಭೈರವಿಯಲ್ಲಿ ನಂತರ ಬರೀ ಭೈರವಿಯಲ್ಲಿ! ನಿಂತಲ್ಲೇ ಚಡಪಡಿಸಿದೆ. ಎಲ್ಲಾದರೂ ಕೂರಲು ಜಾಗಸಿಗುತ್ತೇನೋ ನೋಡಿದೆ. ನನ್ನ ಅದೃಷ್ಟಕ್ಕೆ ಎರಡನೇ ಸಾಲಿನಲ್ಲಿ ಕುಳಿತಿದ್ದ ತಮಿಳ್ ಮಾಮಿ ನಿಂತವರ ನಡುವೆ ತೂರಿಕೊಂಡು ಶೌಚಾಲಯ ಹೊಕ್ಕರು. ನಾನು ಅದಕ್ಕೇ ಕಾದಿದ್ದವಳಂತೆ ಅವರ ಜಾಗದಲ್ಲಿ ಕುಳಿತೆ. 'ಅವಳ್ ವರಾ. ಎಂದಿರಿಂಗೋ' ಮಾಮ ಗರ್ಜಿಸಿದರು. 'ವಂದಾ ಉಟ್ಟುಕುಡುಕರೇ ಸಾರ್' ಹಲ್ಲು ಗಿಂಜಿದೆ. ಅದೇನು ಅವಸರವೋ. ಮಾಮಿ ಎರಡೇ ನಿಮಿಷದಲ್ಲಿ ಬಂದುಬಿಟ್ಟರು. ಎದ್ದುನಿಂತೆ. ನಾಲ್ಕನೇ ಸಾಲಿನ ಸರ್ದಾರ್ಜೀ ಎದ್ದುಹೋದ. ನಾನು ಆ ಜಾಗದಲ್ಲಿ ಕುಳಿತೆ. ಸರ್ದಾರಿಣಿ ಬಾಯೇ ಬಿಡದೆ ಏಳುವಂತೆ ಬೆರಳಿನಲ್ಲಿ ಸಂಜ್ಞೆ ಮಾಡಿದಳು. ನಾನೇನು ಕಮ್ಮಿ? ಆತ ಬಂದರೆ ಏಳುವೆನೆಂದು ಮರು ಸಂಜ್ಞೆ ಮಾಡಿದೆ. ಪಾಪ ಸರ್ದಾರ್ಜೀ ನಿಜಕ್ಕೂ ಒಳ್ಳೆಯವ. ಪೂರ ಹತ್ತು ನಿಮಿಷ ತಡೆದು ಬಂದ. ಇದೇ ವರಸೆ ಮುಂದುವರೆದು ನಾನು ಬಹುತೇಕ ಸೀಟಿನಲ್ಲಿ ಕುಳಿತು ಎದ್ದದ್ದಾಯ್ತು. ಈ ಮಧ್ಯೆ ಒಮ್ಮೆ ನನ್ನವರತ್ತ ಅಕಸ್ಮಾತ್ ನೋಡಿದೆ. ಪಾಪ, ನಮ್ಮ ಸಾಮಾನುಗಳ ರಾಶಿಗಳ ನಡುವೆ ನಿಂತುಕೊಂಡೆ ತೂಕಡಿಸುತ್ತಿದ್ದರು. ಹೃದಯ ಮೋಂಬತ್ತಿಯಂತೆ ಕರಗಿತು. ನಾನಲ್ಲದೆ ಅವರ ಯೋಗಕ್ಷೇಮ ಮತ್ತ್ಯಾರು ನೋಡ್ತಾರು? ಬಂದು ಕೂಡಲು ಸೂಚಿಸಿದೆ. 'ನಾ ಕೂತ್ರೆ ನೀನೇನು ಮಾಡ್ತೀ?'

'ಇಬ್ಬರೂ ಸರದಿಯಮೇಲೆ ಕೂಡೋಣ. ಈಗ ನಿಮ್ಮ ಸರದಿ' ಎಂದು ಎದ್ದು ಜಾಗಕೊಟ್ಟೆ. ಸರದಿಯ ಪ್ರಕಾರ ಹೆಚ್ಚುಕಡಿಮೆ ಎಲ್ಲಾ ಸೀಟಿನಲ್ಲೂ ಕೆಲವು ನಿಮಿಷಗಳಾದರೂ ವಿಜೃಂಭಿಸಿದ್ದಾಯ್ತು.

ಈ ಹಂತದಲ್ಲಿ ನನ್ನದೊಂದು ಅಭಿಪ್ರಾಯವನ್ನು ದಾಖಲಿಸಲೇಬೇಕು. ಸೀಟಿನಿಂದೆದ್ದ ಮಹಿಳೆಯರು ತಮ್ಮ ಕೆಲಸ ಮುಗಿಸಿ ಶೀಘ್ರ ವಾಪಸ್ಸಾದರೆ ಪುರುಷರು ಹಾಗಲ್ಲ. ಅಲ್ಲಿ ಇಲ್ಲಿ ನೋಡುತ್ತಾ ಬಾಗಿಲ ಬಳಿನಿಂತು ವೇಗವಾಗಿ ರಾಚುವ ಗಾಳಿಗೆ ಮೈಒಡ್ಡಿಕೊಳ್ಳುತ್ತಾ ವಿವಿಧ ಅಂಗಚೇಷ್ಟೆ ಮಾಡುತ್ತಾ ಹೊಗೆ ಊದಿ ವಾಯುಮಾಲಿನ್ಯಕ್ಕೆ ತಮ್ಮದೂ ಕೊಡುಗೆ ನೀಡುತ್ತಾ, ಕಡಿಮೆ ಎಂದರೂ ಹದಿನೈದು ನಿಮಿಷಗಳ ನಂತರ ಬರುತ್ತಿದ್ದರು ಪುಣ್ಯಾತ್ಮರು! ಅಂದು ನಾನಿದ್ದ ಪರಿಸ್ಥಿತಿಯಲ್ಲಿ ನನಗವರ ಮೇಲಿನ ಗೌರವ ಇಮ್ಮಡಿಯಾಯ್ತು.

ಊರು ತಲಪಿದ ಮರುದಿನ ಗೆಳತಿಯರೆಲ್ಲಾ ಸೇರಿದಾಗ ನಾನು ಹೇಳಿಕೊಂಡಿದ್ದೇನು ಗೊತ್ತೇ? ನನ್ನ ಸ್ಟ್ಯಾಂಡಿಂಗ್ ಸೀಟಿನ ಬವಣೆಯ ಬಗ್ಗೆ ಎಂದುಕೊಂಡಿರಾ? ಶುದ್ಧಾಂಗವಾಗಿ ತಪ್ಪು. 'ನಾವು ಪ್ರಯಾಣಿಸಿದ್ದು ಎ.ಸಿ. ಫಸ್ಟ್ ಕ್ಲಾಸಿನಲ್ಲೇ. ಆರಾಮವಾಗಿ ಹೋಗಿ ಬಂದೆವು. ಆ ಸೆಕೆಂಡ್ ಕ್ಲಾಸ್ ಪ್ರಯಾಣ ನನ್ನ ಶತ್ರುವಿಗೂ ಬೇಡ. ಆ ಗಲಾಟೆ, ಸೆಖೆ, ದೂಳು. ಛೀ... ಛೀ... ಛೀ...'

## ಕುಮುದಾ ಪುರುಷೋತ್ತಮ್

ಹುಟ್ಟೂರು ತುಮಕೂರು. ಸ್ನಾತಕೋತ್ತರ ಪದವಿಧರೆ. ಮದುವೆಯ ಬಳಿಕ ಪಶ್ಚಿಮ ಬಂಗಾಲದ ಖಡ್ಗಪುರ ಹಾಗೂ ಚೆನ್ನೈಯಲ್ಲಿ ವಾಸ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇನ್ನೂರಕ್ಕೂ ಮೇಲ್ಪಟ್ಟ ಹಾಸ್ಯ ಲೇಖನಗಳು ಮತ್ತು ಸಣ್ಣಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂರು ಕಥಾ ಸಂಗ್ರಹ, ಮೂರು ಹಾಸ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿಯಲ್ಲಿ ನಾಟಕಗಳು, ಗೀತ ರೂಪಕಗಳು ಪ್ರಸಾರಗೊಂಡಿವೆ.